ಶ್ರೀ ಡಿ.ವಿ. ಸದಾನಂದಗೌಡ : ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂ ಮಾಡುವ ಬಗ್ಗೆ ಕೆ.ಎ.ಟಿ.ಯಿಂದ ತೀರ್ಪು ನೀಡಲಾಗಿರುತ್ತದೆ ಎಂದು ಹೇಳಿದ್ದೀರಿ. ಈ ತೀರ್ಪಿನ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಅಧ್ಯಕ್ಷರು : ಕೋರ್ಟಿನಿಂದ ಬಂದಿದೆ. ಕ್ಯಾಬಿನೆಟ್ ಮುಂದೆ ಇಟ್ಟು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ವಾಹನಗಳ ಹೊಗೆ ತಪಾಸಣಾ ಕೇಂದ್ರಗಳು

36 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ವಾಹನಗಳ ಹೊಗೆ ತಪಾಸಣಾ ಕೇಂದ್ರಗಳು ಎಷ್ಟಿವೆ?*

ಆ) *ಕಳೆದ ಒಂದು ವರ್ಷದಲ್ಲಿ ಮಿತಿ ಮೀರಿದ ಹೊಗೆಯನ್ನು ಹೊರಸೂಸಿರುವ ಎಷ್ಟು ವಾಹನಗಳನ್ನು ಪತ್ತೆ ಹಚ್ಚಲಾಗಿದೆ?*

ಇ) *ಇದರಿಂದ ಸಂಗ್ರಹವಾದ ದಂಡದ ಒಟ್ಟು ಮೊತ್ತ ಎಷ್ಟು?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಒಟ್ಟು 96 ವಾಹನ ವಾಯು ಮಾಲಿನ್ಯ ಪರೀಕ್ಷಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ರಾಜ್ಯಾದ್ಯಂತ ದಿನಾಂಕ 1.4.1997ರಿಂದ 31.03.1998ರ ಅವಧಿಯಲ್ಲಿ ಮಿತಿ ಮೀರಿದ ಹೊಗೆ ಹೊರಸೂಸುವ 10,602 ವಾಹನಗಳನ್ನು ಪತ್ತೆ ಹಚ್ಚಿ, ಅವುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ.

ಇ) ವಾಯು ಮಾಲಿನ್ಯ ನಿಯಮಾವಳಿಗಳನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ವಿವಿಧ ವಾಹನಗಳ ಮಾಲೀಕರಿಂದ ಕಳೆದ ಒಂದು ವರ್ಷದಲ್ಲಿ ರೂ. 45,725.00 ದಂಡವನ್ನು ನ್ಯಾಯಾಲಯಗಳಲ್ಲಿ ವಸೂಲು ಮಾಡಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ವಾಹನಗಳ ಹೊಗೆ ತಪಾಸಣಾ ಕೇಂದ್ರಗಳು ಎಷ್ಟಿವೆ ಎಂದು ನಾನು ಕೇಳಿದ್ದೇನೆ. ವಾಯು ಮಾಲಿನ್ಯ ನಿಯಂತ್ರಣ ಮಾಡುವುದಕ್ಕೋಸ್ಕರ ಸುಮಾರು96 ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 10,602 ವಾಹನಗಳನ್ನು ಪತ್ತೆಹಚ್ಚಿ 45 ಸಾವಿರ ರೂಪಾಯಿಗಳನ್ನು ನೀವು ವಸೂಲಿ ಮಾಡಿದ್ದೀರಿ. ನನ್ನ ಪ್ರಶ್ನೆ ಏನು ಎಂದರೆ ಈ 96 ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ನೀವು ಪರ್ಮಿಷನ್ ಕೊಟ್ಟಿರುವುದಕ್ಕೆ ಏನು ಕ್ರೈಟೀರಿಯಾ? ಇದು ಮೊದಲನೆಯದು. ಎರಡನೇಯದು, ಈ ಕೇಂದ್ರಗಳು

ಸ್ಥಾಪನೆ ಆಗುವುದಕ್ಕೆ ಮುಂಚೆ ಬೆಂಗಳೂರಿನಲ್ಲಿ ವಾಯುಮಾಲಿನ್ಯ ಪ್ರಮಾಣ ಎಷ್ಟಿತ್ತೆಂದು ಅಳತೆ ಮಾಡಿದ್ದೀರಾ? ಇವುಗಳ ಸ್ಥಾಪನೆಯಾದ ನಂತರ ಎಷ್ಟು ಕಡಿಮೆಯಾಗಿದೆ? ಇದಕ್ಕೆ ಉತ್ತರ ಕೊಡುತ್ತೀರಾ?

ಶ್ರೀ ಪಿ.ಜಿ. ಆರ್. ಸಿಂಧ್ಯ : ಮೋಟಾರ್ ವೆಹಿಕಲ್ ಆಕ್ಟನಲ್ಲಿ ಏನು ಪ್ರಿಸ್ಕ್ರೈಬ್ ಮಾಡಿದ್ದಾರೆ, ಪೊಲ್ಯೂಷನ್ ಬೋರ್ಡ್‌ನವರು ಏನು ಹೇಳಿದ್ದಾರೆ ಅದರ ಪ್ರಕಾರ ಯಾರ್ಯಾರು ಅಪ್ಲಿಕೇಷನ್ ಕೊಟ್ಟಿದ್ದಾರೆ ಅವರೆಲ್ಲರಿಗೂ ಸಹಿತ ಅನುಮತಿ ಕೊಟ್ಟಿದ್ದೇವೆ. 96 ಜನ ಅಪ್ಲಿಕೇಷನ್ಸ್ ಕೊಟ್ಟಿದ್ದರು ಮತ್ತು ಅವರೆಲ್ಲರಿಗೂ ಸಹಿತ ಕೊಟ್ಟಿದ್ದೇವೆ. ಮತ್ತೆ ಇದನ್ನು ಮಾಡಿದಮೇಲೆ ಎಷ್ಟು ಕಡಿಮೆಯಾಗಿದೆ ಎನ್ನುವುದರ ಬಗ್ಗೆ ಇನ್ನೂ ಅಸೆಸ್‌ಮೆಂಟ್ ಮಾಡಿಲ್ಲ. ಮಾಡಿಯಾದಮೇಲೆ ನಾನು ಅದನ್ನು ಸಭೆಯ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ನಾನು ಏಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಎಂದರೆ, ಬೆಂಗಳೂರು ನಗರದಲ್ಲಿ ಇದೊಂದು ಫ್ರಾಡ್ ಇದೆ. ಆರು ತಿಂಗಳಿಗೊಮ್ಮೆ ಈ ಸರ್ಟಿಫಿಕೇಟ್‌ಗೆ ಜೀವ ಇದೆ ಎಂದು ಕೊಟ್ಟಮೇಲೆ ಎಲ್ಲಾ ಹೋದರು, ಸರ್ಟಿಫಿಕೇಟ್ ತೆಗೆದುಕೊಂಡರು. ನಿಮ್ಮವರು ಯಾರೂ ಕೂಡ ಇವತ್ತು ಚೆಕ್ ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ತಮಗೆ ಒಂದು ಮಾಹಿತಿ ಕಳುಹಿಸುತ್ತಿದ್ದೇನೆ. ವೆಹಿಕಲ್ ನಂಬರ್ ಕೆಎ 01 ಜಿ 1990 ಅದು ಮಾನ್ಯ ಸಭಾಧ್ಯಕ್ಷರ ಕಾಂಟೆಸ್ಸಾ ಕಾರು. ಅದಕ್ಕೆ ಬಜಾಜ್ ಚೇತಕ್ ಎಂದು ಮಾಡಿ ಇವತ್ತು ಪೊಲ್ಯೂಷನ್ ಇಲ್ಲ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ನೀವು ಮಾಡುವುದು ವಾಯು ಮಾಲಿನ್ಯ ನಿಯಂತ್ರಣ ಮಾಡಬೇಕು ಎಂದು ಆದರೆ ಮುಂಚೆ ಅದು ಎಷ್ಟು ಇತ್ತು ಎಂದು ನಮಗೆ ಗೊತ್ತಿಲ್ಲ. ಕೇಂದ್ರ ಏಕೆ ಸ್ಥಾಪನೆ ಮಾಡಿದರೋ ಗೊತ್ತಿಲ್ಲ. ಸ್ಥಾಪನೆಯಾದಮೇಲೆ ಈ ರೀತಿಯ ಸರ್ಟಿಫಿಕೇಟ್‌ಗಳು. ಇದರಿಂದ ಬೆಂಗಳೂರಿನ ಪರಿಸರ ಮಾಲಿನ್ಯ ಕಡಿಮೆಯಾಗಿದೆಯೆ? ಏತಕ್ಕೋಸ್ಕರ ಈ ಕೇಂದ್ರಗಳು ಬೇಕು?

(ಮಾನ್ಯ ಸದಸ್ಯರು ಡಾಕ್ಯುಮೆಂಟನ್ನು ಸಭಾಧ್ಯಕ್ಷರಿಗೆ ಕಳುಹಿಸಿಕೊಟ್ಟರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಎನ್‌ಫೋರ್ಸ್‌ಮೆಂಟ್ ಮಾಡತಕ್ಕಂಥಾದ್ದು ಒಂದು ಭಾಗ. ಎಜ್ಯುಕೇಟ್ ಮಾಡತಕ್ಕಂಥಾದ್ದು ಇನ್ನೊಂದು ಭಾಗ. ಈ ಎರಡರ ದೃಷ್ಟಿಯಿಂದ ಸಹಿತ ಮಾಡಿದ್ದೇವೆ. ಎನ್‌ಫೋರ್ಸ್‌ಮೆಂಟ್ ಮಾಡುವಾಗ ಈ ರೀತಿಯ ಅಕ್ರಮಗಳು ಆಗಿರುವುದು ನಮ್ಮ ಗಮನಕ್ಕೆ ಬಂದಿದೆ. ಈಗಾಗಲೇ ಹತ್ತು ಸೆಂಟರ್‌ಗಳ ಲೈಸೆನ್ಸ್‌ಗಳನ್ನು ರದ್ದು ಮಾಡಿದ್ದೇವೆ. ಅವರು ಏನು ಪರ್ಟಿಕ್ಯುಲರ್ ಆಗಿ ಸ್ಪೆಸಿಫಿಕ್ ಆಗಿ ಹೇಳಿದ್ದಾರೆ, ಅದನ್ನು ತಕ್ಷಣ ವಿಚಾರಣೆ ಮಾಡಿ ಆ ರೀತಿ ಅದು ಆಗಿದ್ದರೆ ಅವರ ಲೈಸೆನ್ಸನ್ನು ರದ್ದು ಮಾಡಿಸುತ್ತೇನೆ.

ಅಧ್ಯಕ್ಷರು : ಡಾಕ್ಯುಮೆಂಟನ್ನು ನಿಮಗೆ ನಾನು ಕಳುಹಿಸಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ತಮಗೆ ಈ ಸರ್ಕಾರ ಈ ನಂಬರಿಗೆ ಬಜಾಜ್ ಚೇತಕ್ ಕೊಟ್ಟಿದೆಯೋ, ಕಾರು ಕೊಟ್ಟಿದೆಯೋ ಎಂಬುದು ನನ್ನ ಪ್ರಶ್ನೆ. ಇದಕ್ಕೆ ನೀವೇ ಉತ್ತರ ಕೊಡಬೇಕು.

ಅಧ್ಯಕ್ಷರು : ನನಗೆ ಕಾರೇ ಕೊಟ್ಟಿದ್ದಾರಪ್ಪಾ.....

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ಪ್ರಶ್ನೆ ಬಂದಿರುವುದು ಬಜಾಜ್ ಚೇತಕ್‌ಗೆ ಆ ನಂಬರ್ ಹಾಕಿದ್ದಾರೆ. ನಿಜಕ್ಕೂ ನಿಮಗೆ ಸರ್ಕಾರ ಕಾರು ಕೊಟ್ಟಿದೆಯೋ, ಚೇತಕ್ ಸ್ಕೂಟರ್ ಕೊಟ್ಟಿದೆಯೋ ಅಂತ .....

ಅಧ್ಯಕ್ಷರು : ನನಗೆ ಕಾರೇ ಕೊಟ್ಟಿದ್ದಾರೆ. ಅದನ್ನು ನಾನು ಸ್ಕೂಟರ್ ಹಾಗೆ ಉಪಯೋಗಿಸಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಇರಬಹುದು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಚಿವರು ಹೇಳಿದರು ಕಂಪ್ಲೇಂಟ್ ಬಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು. ನಿಮ್ಮಲ್ಲಿ ರೆಗ್ಯುಲರ್ ಸಿಬ್ಬಂದಿ ಇಲ್ವಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ರೆಗ್ಯುಲರ್ ಸಿಬ್ಬಂದಿ ಇರತಕ್ಕಂಥಾದ್ದು ಬಹಳ ಕಡಿಮೆ. ಎನ್‌ಫೋರ್ಸ್‌ಮೆಂಟ್ ಮೂಲಕವಾಗಿ ಇದು ಆಗುತ್ತದೆ ಎಂದು ಹೇಳಿ ನಾನೂ ಸಹಿತ ತಿಳಿದುಕೊಂಡಿಲ್ಲ. ಆರು ತಿಂಗಳಿಗೊಮ್ಮೆ ಮಾಡಬೇಕು. ಇದೂ ಕೂಡ ಶಿಕ್ಷಣ ಕೊಡುವುದಾಗಿದೆ. ಅದೇ ವೇಳೆಗೆ ಇವರು ಮಾಡಿರುವುದು ಸರಿ ಎಂದು ನಾನು ಡಿಫೆಂಡ್ ಮಾಡುತ್ತಿಲ್ಲ. ಅವರನ್ನು ಸಸ್ಪೆಂಡ್ ಮಾಡುತ್ತೇನೆ. ಮತ್ತು ಆಗಾಗ್ಗೆ ಇದನ್ನು ಉನ್ನತಮಟ್ಟದ ಪೋಲೀಸ್ ಅಧಿಕಾರಿಗಳು, ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳು ನೋಡುತ್ತಾರೆ. ಪೋಲೀಸ್‌ನವರಿಗೂ ಬೇಕಾದರೆ ಈ ಟೆಸ್ಟ್ ಮಾಡತಕ್ಕಂಥ ಅಥಾರಿಟಿಯನ್ನು ನಾನು ಕೊಡಲಿಕ್ಕೆ ತಯಾರಿದ್ದೇನೆ. ಸದನ ಆದನಂತರ ಇದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ನನಗನ್ನಿಸಿರುವುದು ಈ ಯೋಜನೆ ಅವರು ಜಾರಿಗೆ ತಂದಿರುವುದೇ ಜನ ಸರ್ಟಿಫಿಕೇಟ್ ತೆಗೆದುಕೊಳ್ಳಲಿ ಎಂದು. ವಾಯುಮಾಲಿನ್ಯ ಕಡಿಮೆಯಾಗಲಿ ಎಂದಲ್ಲ. ಅವರು ಸರ್ಟಿಫಿಕೇಟ್‌ಗಾಗಿ ಕ್ಯೂ ನಿಂತುಕೊಂಡು ತೆಗೆದುಕೊಂಡರು. ಈ ಆರು ತಿಂಗಳು ಯಾರಿಗೂ ಚೆಕ್ ಮಾಡಲಿಲ್ಲ. ಇನ್ನೊಂದು ತಿಂಗಳಿಗೆ ಎಲ್ಲಾ ಕಡೆ ಚೆಕ್ ಮಾಡಿ, ಹಿಡಿಯುವುದಕ್ಕೆ ಶುರು ಮಾಡುತ್ತೀರಿ. ಈ ಯೋಜನೆಯನ್ನು ಏತಕ್ಕೋಸ್ಕರ ತಂದಿದ್ದು? ನೀವು ತಪಾಸಣೆ ಕೇಂದ್ರಗಳನ್ನು ಮುಚ್ಚಿಬಿಡಿ.

ಅಧ್ಯಕ್ಷರು : ನೀವು ಕಾಲೇಜಿನಲ್ಲಿದ್ದಾಗ ಎನ್.ಸಿ.ಸಿಯಲ್ಲಿ ಇದ್ದರೇ? ಅವರಿಗೆ ಗೊತ್ತು. ಇದೆಲ್ಲಾ ಹಾಗೆಯೇ. He made it very clear. Enforcement and education are two aspects. In a system like ours, these defects are bound to be there.

SRI S. SURESH KUMAR : I am requesting the Minister to enforce that.

ಶ್ರೀ ವಿರೂಪಾಕ್ಷಪ್ಪ : ಅಧ್ಯಕ್ಷರೇ, ನನ್ನ ಪ್ರಶ್ನೆ 364 (2308)ಕ್ಕೆ ಉತ್ತರವೇ ಬಂದಿಲ್ಲ.

ಅಧ್ಯಕ್ಷರು : ನೀವೇ ತಡವಾಗಿ ಬಂದಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್ : ಅದರ ಪ್ರಶ್ನೆ ಮಾರ್ಕೆಟಿಂಗ್ ಇಲಾಖೆಗೆ ಬರುವುದಿಲ್ಲ. ತಪ್ಪಾಗಿ ನಮಗೆ ಬಂದಿತ್ತು. ಕೂಡಲೇ ಆಹಾರ ಇಲಾಖೆಗೆ ಕಳುಹಿಸಿದ್ದೇವೆ.

ಅಧ್ಯಕ್ಷರು : ಆಹಾರ ಇಲಾಖೆಯ ಮಂತ್ರಿಗಳ ಪ್ರಶ್ನೆಗಳಿದ್ದಾಗ, ನಿಮ್ಮ ಪ್ರಶ್ನೆಗೂ ಉತ್ತರ ತರಿಸಿಕೊಡುತ್ತೇನೆ. ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ದಿನದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ 25ನೇ ಪಟ್ಟಿಯಲ್ಲಿನ ಒಟ್ಟು 91 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಇಡುತ್ತಿದ್ದೇನೆ.

ಸೋಮವಾರಪೇಟೆ ತಾಲ್ಲೂಕಿನ ಚೌಡು ಗ್ರಾಮಕ್ಕೆ ಸೇರಿದ ಜಮೀನಿನ ಸ್ವಾಧೀನ

1641 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸೋಮವಾರಪೇಟೆ ತಾಲ್ಲೂಕಿನ ಚೌಡು ಗ್ರಾಮಕ್ಕೆ ಸೇರಿದ ಜಮೀನು 7.82 ಎಕರೆ ವಿಸ್ತೀರ್ಣವನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಸುಮಾರು ರೂ. 27,840.20 ಪೈಸೆಯನ್ನು 17.7.1989ರಲ್ಲಿ ಕೃಷಿ ಉತ್ಪಾದನೆ ವತಿಯಿಂದ ಪಾವತಿ ಮಾಡಿದ್ದರೂ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿರುವುದಿಲ್ಲವಲ್ಲದೆ ಪಡೆಕೊಂಡು ಜಮೀನು ಬಡವರ ಜಮೀನಾಗಿದ್ದು ಪರಿಹಾರ ಕೊಟ್ಟಂತಹ ಹಣ ಬಹಳ ಕಡಿಮೆಯಾಗಿದ್ದು ಸರ್ಕಾರ ಹೆಚ್ಚು ಹಣ ಕೊಡುವ ಉದ್ದೇಶವಿದೆಯೇ?*

ಆ) *ಈ ಜಮೀನಿನ ಮಾಲೀಕರು ಸರ್ಕಾರದ ಮೇಲೆ ಹಾಕಿದ ಮೊಕದ್ದಮೆ ಕೋರ್ಟಿನಲ್ಲಿ ಇತ್ಯರ್ಥ ಆಗಿದೆಯೇ? ವಿವರಗಳನ್ನು ಕೊಡಿ?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ರೂ.1,27,840.20 ಗಳನ್ನು ಭೂ ಪರಿಹಾರ ಮೊತ್ತವನ್ನು ಈಗಾಗಲೇ ತುಂಬಲಾಗಿದೆ. ಭೂಮಾಲೀಕರು ಹೆಚ್ಚಿನ ಪರಿಹಾರ ಕೋರಿ ಮಡಿಕೇರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದೆ. ನ್ಯಾಯಾಲಯ ನೀಡುವ ತೀರ್ಪನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ. ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದೆ.